**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ/ಸತ್ರ ಮೊಕದ್ದಮೆ ಸಂಖ್ಯೆ- 816/2021**

**ಪ್ರಾಸಾಃ- 11 ಚಾಸಾಃ- 12**

| | | |
|---|---|---|
| ಸಾಕ್ಷಿಯ ಹೆಸರು | : | ದೊಡ್ಡ ಬಸಪ್ಪ |
| ತಂದೆ/ಗಂಡನ ಹೆಸರು | : | ಲೇಟ್ ದ್ಯಾವಣ್ಣ |
| ವಯಸ್ಸು | : | 47 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಹೊಳಗುಂದ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- **12.12.2023**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನಗೆ ಚಾಸಾ 13 ಮತ್ತು 20 ಗೊತ್ತು . ನಾನು ಹೊಳಗುಂದ ಮಂಡಲ ಪಂಚಾಯಿತಿ ವೈಸ್ ಚೇರ್‌ಮೆನ್ ಇದ್ದು ಈಗ್ಗೆ 2 ವರ್ಷಗಳ ಹಿಂದೆಬಳ್ಳಾರಿ ಪೋಲೀಸರು ನಮ್ಮ ಪಂಚಾಯಿತಿ ಕಚೇರಿಗೆ ಬಂದು ನಮ್ಮ ಸಹಿಗಳನ್ನು ಪಡೆದು ಕೊಂಡಿರುತ್ತಾರೆ . ನನಗೆ ಚಾಸಾ 36 ಗೊತ್ತು . ಚಾಸಾ 36 ರವರು ನಮ್ಮ ಸಮಕ್ಷಮ ಯಾವುದೇ ಪೋಟೋಗಳನ್ನು ತೋರಿಸಿರುವುದಿಲ್ಲ . ನನಗೆ ಚಾಸಾ 1 ಗೊತ್ತಿಲ್ಲ . ಪೊಲೀಸರು ನಮ್ಮ ಸಮಕ್ಷಮ ಚಾಸಾ 1 ರವರ ತಾಯಿ ಮತ್ತು ತಂಗಿಯರ ಶವಗಳು ಕಾಲುವೆಯಲ್ಲಿ ತೇಲಿ ಹೋಗುತ್ತಿದ್ದ ಬಗ್ಗೆ ಪೋಟೋ ತೆಗೆದಿದ್ದನ್ನು ನಮ್ಮ ಮುಂದೆ ಯಾರೂ ಹಾಜರು ಪಡಿಸಿಲ್ಲ ಮತ್ತು ಯಾವುದೇ ಪಂಚನಾಮೆ ಮಾಡಿಲ್ಲ . ಸಾಕ್ಷಿಗೆ ಪೋಟೋ ಜಪ್ತು ಪಂಚನಾಮೆ ತೋರಿಸಲಾಗಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ಈಗಾಗಲೇ ನಿಪಿ-12 ಎಂದು ಗುರುತಿಸಲಾಗಿದ್ದು ಅದರಲ್ಲಿನ ಸಾಕ್ಷಿದಾರರ ಸಹಿಯನ್ನು ನಿಪಿ-12(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ ತನ್ನ ಇರುವ ಬಗ್ಗೆ ಗುರುತಿಸಿದ್ದು ಸದರಿ ಎರಡು ಪೋಟೋಗಳನ್ನು ನಿಪಿ-50 ಎಂದು ಗುರುತಿಸಲಾಯಿತು . ನಿಪಿ-50 ಪೋಟೋಗಳನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಗೊತ್ತಿಲ್ಲ .

( ಈ ಹಂತದಲ್ಲಿ  ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು , ಕೋರಿಕೆ ಸಕಾರಣಗಳಿಂದ ಕೂಡಿದ್ದು  ಅದನ್ನು ಪುರಸ್ಕರಿಸಲಾಗಿದೆ ).



ಪಾಟೀ  ಸವಾಲುಃ ಅಭಿಯೋಜಕರವರಿಂದಃ

ದಿಃ 12-7-2021 ರಂದು ಬೆಳಿಗ್ಗೆ 11-00 ರಿಂದ 12-00 ಅವಧಿಯಲ್ಲಿ ಹೊಳಗುಂದ ಗ್ರಾಮ ಪಂಚಾಯಿತಿ ಕಚೇರಿಗೆ  ಪಂಚನಾಮೆ ಸಲುವಾಗಿ ನಮ್ಮನ್ನು ಕರೇಸಿದ್ದರು ಎಂದರೆ ಸರಿಯಲ್ಲ. ಅಲ್ಲಿ ಚಾಸಾ 20 ಮತ್ತು ಚಾಸಾ 1 ರವರು ಹಾಜರಿದ್ದು  ನಾವು  ಚಾಸಾ 20 ರವರನ್ನು ವಿಚಾರಿಸಿದ್ದೆವು ಎಂದರೆ ಸರಿಯಲ್ಲ .  ಚಾಸಾ 20 ರವರು  ಕೆನಾಲ್ ನಲ್ಲಿ  ಇಬ್ಬರು ಹೆಣ್ಣು ಮಕ್ಕಳ ಶವಗಳು  ತೇಲಿ ಹೋಗಿದ್ದನ್ನು ತನ್ನ ಮೊಬೈಲ್ ನಿಂದ ಪೋಟೋ ತೆಗೆದ ಬಗ್ಗೆ ಹೇಳಿ  ಮೊಬೈಲ್ ಹಾಜರು ಪಡಿಸಿದ್ದ ಎಂದರೆ ಸರಿಯಲ್ಲ .  ಆತನ  ಮೊಬೈಲ್ ಪೋನ್ ನಲ್ಲಿದ್ದ ಪೋಟೋಗಳನ್ನು ನೋಡಿ ಚಾಸಾ 1 ರವರು ತನ್ನ ತಾಯಿ ಜಯಮ್ಮ  ಮತ್ತು ತಂಗಿ  ರಾಮಲಕ್ಷ್ಮಿ ಎಂದು ಗುರುತಿಸಿದ್ದಳು ಎಂದರೆ ಸರಿಯಲ್ಲ .  ನಂತರ ಚಾಸಾ 36 ರವರ ಪೊಟೋ ಸ್ಟುಡಿಯೋದವರನ್ನು ಸ್ಥಳಕ್ಕೆ ಕರೆಸಿ ಡಿವಿಡಿಯಲ್ಲಿ ಹಾಕಿ  ಸದರಿ ಪೋಟೋಗಳನ್ನು ಜಪ್ತು ಮಾಡಿಕೊಂಡು ಪೋನ್ ನ್ನು ಚಾಸಾ 20 ರವರಿಗೆ  ವಾಪಾಸ್ಸು  ಕೊಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿಗೆ ಪೋಟೋಗಳಿಂದ ಡಿವಿಡಿಯನ್ನು ಪ್ಲೇ ಮಾಡಿ ತೋರಿಸಲಾಗಿ ನೋಡಿ ಗುರುತಿಸಿರುವುದಿಲ್ಲ. ಸದರಿ ಡಿವಿಡಿಯನ್ನು ಈಗಾಗಲೇ ನಿಪಿ-13 ಎಂದು ಗುರುತಿಸಲಾಗಿರುತ್ತದೆ .

ನನಗೆ ಈಗ ಓದಿ ಹೇಳಿದ ನಿಪಿ-12 ರಂತೆ ಪಂಚನಾಮೆ ಮಾಡಿದ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀ ಸವಾಲುಃ ಆರೋಪಿತರ   ಪರ ಶ್ರೀ. ಎಸ್ ಆರ್ ಪಿ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.